# ಧ್ವನಿಯೇ ಪ್ರತಿರೋಧದ ಅಸ್ತ್ರ

**ತಲತಲಾಂತರದಿಂದ ಸಮಾಜದಲ್ಲಿ ಮಹಿಳೆಯರನ್ನು ಸುಮ್ಮನಾಗಿಸುವುದೇ ಸಾಮಾಜಿಕ ನಿಯಮವಾಗಿ ಬದಲಾಗಿದೆ. ಇದೀಗ ಮದುವೆಯಾಗುವ ಆಮಿಶವೊಡ್ಡಿ ದೈಹಿಕ ಸಂಪರ್ಕ ಬಳಸಿದರೆ ಅದು ಅತ್ಯಾಚಾರ ಎನಿಸದು ಎಂಬ ತೀರ್ಪು ಬಂದಿದೆ. ಪುರುಷಪ್ರಧಾನ ಸಮಾಜದಲ್ಲಿ ಇದು ಶೋಷಕರಿಗೆ ಅನುಕೂಲ ಎಂದೆನಿಸುವಂತಿದೆ.**



ವಿಜಯ

ಮದುವೆಗೆ ಮೊದಲು ಲೈಂಗಿಕ ಸಂಪರ್ಕವೇರ್ಪಟ್ಟಿದ್ದು, ಮದುವೆಯಾಗದಿದ್ದರೆ ಅದನ್ನು ಅಪರಾಧದ ವ್ಯಾಪ್ತಿಗೆ ತರಲಾಗದು ಎಂದು ಕೋರ್ಟ್ ಈಚೆಗೆ ಒಂದು ತೀರ್ಪು ನೀಡಿದೆ. ಇದೊಂದು ಚರ್ಚಾರ್ಹವಾದ ವಿಷಯ.

ಆದರೆ, ಮದುವೆಯಾಗಿದ್ದೂ, ಬಲವಂತದ ಮಿಲನವನ್ನು ಬಲಾತ್ಕಾರವೆಂದು ಪರಿಗಣಿಸಬಹುದು ಎಂದೂ ಕೋರ್ಟ್ ಹೇಳಿದೆ. ನಮ್ಮ ಸಾಮಾಜಿಕ ಸಂಬಂಧಗಳ ಚೌಕಟ್ಟಿನಲ್ಲಿ ಇದನ್ನು ಅಪರಾಧವೆಂದು ಪರಿಗಣಿಸುವುದೇ ಇಲ್ಲ. ಮದುವೆಯಾದ ತಕ್ಷಣ ಪತ್ನಿಯ ಮೇಲೆ ಪತಿಯ ಹಕ್ಕು, ಅಧಿಕಾರ ಇರುತ್ತದೆ ಎಂಬಂಥ ಸಾಮಾಜಿಕ ಮೌಲ್ಯಗಳು, ಪುರುಷರಲ್ಲಷ್ಟೇ ಅಲ್ಲ, ಮಹಿಳೆಯರಲ್ಲಿಯೂ ಬೇರೂರಿವೆ. ಈ ಮೌಲ್ಯಗಳು ಅದೆಷ್ಟು ಆಳವಾಗಿ ಬೇರೂರಿವೆ ಎಂದರೆ, ಸುಮ್ಮನೆ ಸಹಿಸುವುದೇ ಪತ್ನಿ ಧರ್ಮ ಎಂಬಂಥ ಮೌಲ್ಯವನ್ನೂ ಬೆಳೆಸಲಾಗಿದೆ.

ಬಲಾತ್ಕಾರ ಮತ್ತು ಲೈಂಗಿಕ ಕಿರುಕುಳ, ಅನುಚಿತ ವರ್ತನೆ ಇವೆಲ್ಲವೂ ಅಪರಿಚಿತರಿಗಿಂತಲೂ ಪರಿಚಿತರಿಂದಲೇ ಅತಿ ಹೆಚ್ಚು ಆಗುತ್ತಿರುತ್ತವೆ. ಈ ಬಗ್ಗೆ ಮಾತಾಡಕೂಡದು ಎಂಬ ಸೂಚನೆಗಳೇ ಹೆತ್ತವರಿಂದ ಬಂದಿರುತ್ತವೆ. ದೇಶದಲ್ಲಿ ಶೇ.5.6ರಷ್ಟು ಮಾತ್ರ ಮದುವೆಯ ಬಾಂಧವ್ಯದಲ್ಲಿರುವವರಿಂದ ಆಗುವ ಬಲಾತ್ಕಾರದ ಬಗ್ಗೆ ದೂರು ದಾಖಲಾಗಿವೆ ಎಂದು ರಾಷ್ಟ್ರೀಯ ಅಪರಾಧ ವರದಿಯ ಅಂಕಿ ಅಂಶಗಳು ಹೇಳುತ್ತವೆ. ಅಪರಾಧದ ಪ್ರಮಾಣ ಕಡಿಮೆ ಎಂದು ನಿಟ್ಟುಸಿರು ಬಿಡುವಂತಿಲ್ಲ. ದಾಖಲಾಗುತ್ತಿರುವ ದೂರುಗಳ ಪ್ರಮಾಣ ಕಡಿಮೆ ಇದೆಯೆಂದು ಯೋಚಿಸಬೇಕಾಗಿದೆ.

ಮಹಿಳೆಯರ ದೇಹ ಅವರಿಗೇ ಸೇರಿದ್ದು. ಅವರ ಆಯ್ಕೆ ಎಂಬುದು ಹೊಸ ಸ್ತ್ರೀವಾದದ ಧೋರಣೆಯಲ್ಲ. ಇದು ಮಾನವೀಯ ಮೌಲ್ಯಕ್ಕೆ ಹೆಚ್ಚು ಮಹತ್ವ ನೀಡಬೇಕಾಗಿರುವ ವಿಷಯವಾಗಿದೆ. ಮದುವೆ ಎರಡು ಜೀವಗಳು ಪರಸ್ಪರ ಹೊಂದಿಕೊಂಡು ಬದುಕಲೆಂದು ಇರುವ ಬಾಂಧವ್ಯ. ಅದನ್ನು ಒಬ್ಬ ಶೋಷಕನಾಗಿಯೂ ಮಹಿಳೆ ಶೋಷಿತೆಯಾಗಿಯೂ ಉಳಿಯಲು ಮಾಡಿರುವ ಒಪ್ಪಂದವಲ್ಲ. ಇದೊಂದು ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಪರಸ್ಪರ ಗೌರವ ಇರಬೇಕು. ಗೌರವದ ಮೂಲಕವೇ ಪ್ರೀತಿ ಹುಟ್ಟಲು ಸಾಧ್ಯ.

ಭಾರತೀಯ ವ್ಯವಸ್ಥೆಯಲ್ಲಿ ಮದುವೆಯನ್ನು ಮಕ್ಕಳು ಹೆರಲು ನೀಡುವ ಪರವಾನಗಿ ಎಂದೇ ಭಾವಿಸಲಾಗಿದೆ. ಹೆಂಡ್ತಿಯನ್ನೂ ತಮ್ಮ ಆಸ್ತಿಯಂತೆ, ತಮಗೆ ಸೇರಿದ ಸ್ವತ್ತಿನಂತೆ ಭಾವಿಸುವುದು ಮತ್ತು ವರ್ತಿಸುವುದು ಸ್ವೀಕೃತ ನಿಯಮವಾಗಿಯೇ ಬೆಳೆದಿದೆ. ಇದೇ ಕಾರಣಕ್ಕಾಗಿಯೇ ಕುಟುಂಬವೊಂದರಲ್ಲಿ ಹಿಂಸೆಗೊಳಗಾಗುವ ಮಹಿಳೆ ದೂರು ಸಲ್ಲಿಸುವುದಿಲ್ಲ. ಎಲ್ಲವನ್ನೂ 'ತುಟಿ ಕಚ್ಚಿ' ನಡೆಯಬೇಕೆನ್ನುವ ಒಂದೇ ಒಂದು ನೀತಿಯಿಂದಾಗಿ ಯಾವ ಶೋಷಣೆಗಳೂ ಹೊಸಿಲಿನಿಂದಾಚೆ ಬರದಂತೆ ಕಾಯಲಾಗುತ್ತದೆ. ದೇಹದ ಮೇಲಿನ ದಾಳಿ, ದೇಹವನ್ನೂ ಜೀವವನ್ನೂ ತಮಗೇ ಸೇರಿದ್ದು ಎಂಬ ಪುರುಷಾಳ್ವಿಕೆಯ ಮನಸ್ಥಿತಿಯನ್ನು ಗುರುತಿಸುವುದು ಪಾಲಕರಿಂದ ಮತ್ತು ಪುರುಷರಿಂದಲೇ ಆಗಬೇಕಾಗಿದೆ.

ಆಳುವ ಮತ್ತು ಅಧಿಕಾರಸ್ಥ ಮನಸ್ಥಿತಿ ಇರುವವರೆಗೂ ಈ ಸಮಸ್ಯೆಗಳು ಪ್ರತಿ ಮನೆಗಳಲ್ಲಿಯೂ ಒಂದಲ್ಲ ಒಂದು ಸ್ವರೂಪದಲ್ಲಿ ಕಾಣಿಸುತ್ತಲೇ ಇರುತ್ತವೆ. ಕುಟುಂಬದಲ್ಲಿ ಆಗುವ ದೌರ್ಜನ್ಯಗಳು ದೈಹಿಕ ಹಲ್ಲೆಯೇ ಆಗಬೇಕೆಂದಿಲ್ಲ. ಅನುಮಾನದಿಂದ ನೋಡುವುದು, ಅಲಕ್ಷ್ಯ ಮಾಡುವುದು, ಮನೆಯ ಹೊಣೆಗಾರಿಕೆಯನ್ನು ಹಂಚಿಕೊಳ್ಳದೇ ಇರುವುದು, ಮನೆಯ ಜವಾಬ್ದಾರಿಯನ್ನು ಹೆಂಡ್ತಿಯ ಮೇಲೆಯೇ ವಹಿಸುವುದು, ಮಕ್ಕಳ ಜವಾಬ್ದಾರಿ ಹೊರದೇ ಇರುವುದು ಇವೆಲ್ಲವೂ ಅಪರಾಧದ ವ್ಯಾಪ್ತಿಗೇ ಬರುವಂಥವು. ಆದರೆ ಇವೆಲ್ಲಕ್ಕೂ ಪುರುಷಪ್ರಧಾನ ವ್ಯವಸ್ಥೆಯಲ್ಲಿ, ಗಂಡಸು ಏನು ಮಾಡಿದರೂ ನಡೆದೀತು, ಹೆಂಡತಿಯ ತಪ್ಪಿನಿಂದಲೇ ಅವ ಹಾಗಾಗಿರಬಹುದು ಎಂಬ ಸಮಜಾಯಿಷಿಗಳೇ ಸಮಾಜದಲ್ಲಿ ಸಮರ್ಥನೆ ಪಡೆಯುತ್ತಿರುವುದು ದುರಂತ.

ಮನೆಯೊಳಗೆಯೇ ಸುರಕ್ಷೆಯನ್ನು ಅನುಭವಿಸದ ಮಹಿಳೆಯು, ಹೊರಗಿನ ಶೋಷಣೆಗಳಿಗೂ ಬಾಯಿಬಿಡದಂತೆ ಸುಮ್ಮನಿರುವುದು ಅಭ್ಯಾಸ ಮಾಡಿಕೊಳ್ಳುತ್ತಾಳೆ. ಹೀಗೆ ಸುಮ್ಮನಿರಿಸುವುದೇ ಪಾಳೇಗಾರಿಕೆ ಮನೋಭಾವದ, ಪುರುಷ ಪ್ರಧಾನ ಸಮಾಜದ ಅಸ್ತ್ರವಾಗಿದೆ. ಧ್ವನಿ ಎತ್ತುವುದು, ಮನೆಯೊಳಗಿನ ಹಿಂಸೆಗಳ ಬಗ್ಗೆ ಮಾತಾಡುವುದೇ ಎಚ್ಚರಿಕೆಯ ಗಂಟೆಯಾಗಬಹುದು. ಮಾತನಾಡದೇ ಇದ್ದಲ್ಲಿ ಎಲ್ಲ ಹಿಂಸಾಕೃತ್ಯಗಳೂ, ಬಲಾತ್ಕಾರಗಳೂ ನಾಲ್ಕುಗೋಡೆಗಳ ನಡುವಿನ ಬಿಕ್ಕಳಿಕೆಯಾಗಿ ಮಸುಕಾಗಿ ಹೋಗುತ್ತವೆ. ಮುಂದಿನ ಪೀಳಿಗೆಗೆ ಸುರಕ್ಷಿತ ಬದುಕು ನೀಡಬೇಕೆಂದರೆ ಈ ಪೀಳಿಗೆಯು ಮಾತಾಡುವ, ಧ್ವನಿಯನ್ನು ಅಸ್ತ್ರವಾಗಿಸಿಕೊಳ್ಳಬೇಕಾಗಿದೆ.

ಈ ನಿಟ್ಟಿನಲ್ಲಿ ಹೆಣ್ಣುಮಕ್ಕಳೂ ಎಚ್ಚರವಹಿಸಬೇಕಾಗಿದೆ. ನಮಗೆ ಗೊತ್ತಿಲ್ಲದಂತೆಯೇ ಪುರುಷಪ್ರಧಾನ ಮೌಲ್ಯಗಳನ್ನು ಬೆಳೆಸುತ್ತಿರುತ್ತೇವೆ. ಬದಲಾವಣೆಯಾಗಬೇಕಿರುವುದು ನಮ್ಮ ಪಾಲನೆಯಲ್ಲಿ. ಪ್ರತಿ ಜೀವವೂ, ಜೀವನವೂ ಮುಖ್ಯವಾದುದು. ಪರಸ್ಪರ ಗೌರವಿಸುವುದನ್ನು ಕಲಿತರೆ, ಯಾವುದೇ ಕಾನೂನು ದುರುಪಯೋಗವಾಗುವುದನ್ನೂ ತಡೆಯಬಹುದು. ಮತ್ತು ಇಂಥ ಶೋಷಣೆಗಳನ್ನೂ ತಡೆಯಬಹುದಾಗಿದೆ.

■ **ರಶ್ಮಿ ಎಸ್**